# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 55(35) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 04.12.2023 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಕಾಲೇಜುಗಳಲ್ಲಿ ಪದವಿ 1,3 ಮತ್ತು 5ನೇ ಸೇಮಿಸ್ಟರ್ (ಎನ್ ಇಪಿ) ತರಗತಿಗಳು ಆರಂಭವಾಗಿ 40 ದಿನ ಕಳೆದರೂ ಪಠ್ಯಕ್ರಮ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ 2023-24ನೇ ಶೈಕ್ಷಣಿಕ ಸಾಲಿನ ಸೆಮಿಸ್ಟರ್ ತರಗತಿಗಳು 22.9.2023ರಿಂದ ಪ್ರಾರಂಭವಾಗಿದ್ದು 1,2,3 ಮತ್ತು 4ನೇ ಸೆಮಿಸ್ಟರ್ ಗಳ ಪಠ್ಯಕ್ರಮಗಳನ್ನು ಹಿಂದಿನ ವರ್ಷಗಳಲ್ಲಿ ನಿಗಧಿತ ಸಮಯದಲ್ಲಿ ಪ್ರಕಟಿಸಲಾಗಿದ್ದು, ಅದೇ ಪಠ್ಯಕ್ರಮಗಳು ಈ ಶೈಕ್ಷಣಿಕ ವರ್ಷದಲ್ಲೂ ಜಾರಿಯಲ್ಲಿರುತ್ತವೆ.<br><br>5 ಮತ್ತು 6ನೇ ಸೆಮಿಸ್ಟರ್‌ಗಳ ಮಾದರಿ ಪಠ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ನಂತರ ಸದರಿ ಪಠ್ಯಕ್ರಮಗಳ ಬಗ್ಗೆ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಗಳು ಚರ್ಚಿಸಿ ಸೂಕ್ತ ಮಾರ್ಪಾಡುಗಳೊಂದಿಗೆ ಪಠ್ಯಕ್ರಮಗಳನ್ನು ಅಂತಿಮಗೊಳಿಸಿದ ನಂತರ ಸಂಬಂಧಿಸಿದ ನಿಕಾಯಗಳಾದ ಕಲಾ ನಿಕಾಯ ದಿನಾಂಕ: 15-09-2023, ವಿಜ್ಞಾನ ನಿಕಾಯ ದಿನಾಂಕ: 11-09-2023, ವಾಣಿಜ್ಯ ನಿಕಾಯ ದಿನಾಂಕ: 16-09-2023 ಸಭೆ ಸೇರಿ ಪಠ್ಯಕ್ರಮಗಳನ್ನು ಅನುಮೋದಿಸಿರುತ್ತವೆ. ಅನುಮೋದನೆಯಾದ ದಿನದಂದೇ ಸಂಬಂಧಪಟ್ಟ ಡೀನರು ಹಾಗೂ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳು ಆಯಾ ನಿಕಾಯಗಳ ಸಂಬಂಧಪಟ್ಟ ಶಿಕ್ಷಕರಿಗೆ ಪ್ರಸರಿಸಿರುತ್ತಾರೆ.<br><br>5 ಮತ್ತು 6ನೇ ಸೆಮಿಸ್ಟರ್‌ನ ಪಠ್ಯಕ್ರಮಗಳು ದಿನಾಂಕ: 20-09-2023ರಂದು ನಡೆದ ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನಲ್ಲಿ ಅನುಮೋದನೆಯಾಗಿದ್ದು, ವಿದ್ಯಾವಿಷಯಕ |

| | | |
|---|---|---|
| | | ಪರಿಷತ್ತು ಸೂಚಿಸಿದ್ದ ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಿ ತಿದ್ದುಪಡಿಯಾದ 5 ಮತ್ತು 6ನೇ ಸೆಮಿಸ್ಟರ್‌ನ ಪಠ್ಯಕ್ರಮಗಳನ್ನು ಅಕ್ಟೋಬರ್ 30, 2023ರೊಳಗೆ ವಿಶ್ವವಿದ್ಯಾಲಯದ ಹೊಸ ಅಂತರ್ಜಾಲ https://bangaloreuniversity.karnataka.gov.in/462/under-graduate-syllabus/en ರಲ್ಲಿ ಪ್ರಕಟಿಸಲಾಗಿತ್ತು.<br><br>NEP – 2020ರಡಿ ಬರುವ 5ನೇ / 6ನೇ ಸೆಮಿಸ್ಟರ್‌ನ Skill Enhancement Courses (sec) ರಡಿ ನಿರ್ಧಿಷ್ಟಪಡಿಸಲಾದ Employability Skills / Cyber Security ಗೆ ಸಂಬಂಧಿಸಿದಂತೆ ಪಠ್ಯಕ್ರಮಗಳನ್ನು ಪರಿಷ್ಕರಿಸಲು ದಿನಾಂಕ: 20-09-2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಸಮಿತಿಯನ್ನು ರಚಿಸಿದ್ದ ಕಾರಣ, ಸಮಿತಿಯ ಪರಿಷ್ಕೃತ ಪಠ್ಯಕ್ರಮಗಳನ್ನು ಸಲ್ಲಿಸಿದ ನಂತರ, ದಿನಾಂಕ: 16-11-2023 ಮತ್ತು 17-11-2023 ರಂದು ಕ್ರಮವಾಗಿ Employability Skills ಮತ್ತು Cyber Security ಪಠ್ಯಕ್ರಮಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. |
| **(ಆ)** | 5ನೇ ಸೇಮಿಸ್ಟರ್ (ಎನ್‌ಇಪಿ) ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಪಠ್ಯಕ್ರಮಗಳು ಪುಸ್ತಕ ರೂಪದಲ್ಲಿ ದೊರೆಯದೆ ಇದುದರಿಂದ ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರಿಗೆ ಸಮಸ್ಯೆಗಳನ್ನು ಸೃಷ್ಠಿಸಿದಂತೆ ಆಗುವುದಿಲ್ಲವೇ; | NEP-2020ರಡಿ ರಚಿಸಿರುವ ಭಾಷಾ ವಿಷಯಗಳು (1 ರಿಂದ 4 ಸೆಮಿಸ್ಟರ್) ಹಾಗೂ ಐಚ್ಛಿಕ ವಿಷಯಗಳನ್ನು ಹೊರತು ಪಡಿಸಿ ಉಳಿದ 5ನೇ ಸೆಮಿಸ್ಟರ್/6ನೇ ಸೆಮಿಸ್ಟರ್‌ಗಳಲ್ಲಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಪಠ್ಯಕ್ರಮಗಳನ್ನು ಮೊದಲಿನಿಂದಲೂ ಪುಸ್ತಕ ರೂಪದಲ್ಲಿ ಮುದ್ರಿಸಲಾಗುತ್ತಿಲ್ಲ.<br><br>ಬೋಧಕರು ಸದರಿ ಪಠ್ಯಕ್ರಮಗಳಲ್ಲಿನ Reference ಪುಸ್ತಕಗಳನ್ನಾಧರಿಸಿ ಹಾಗೂ ಕಾಲೇಜುಗಳ ಗ್ರಂಥಾಲಯಗಳ ಆಕರ ಗ್ರಂಥಗಳ ಮುಖಾಂತರ ಸಹಾಯ ಪಡೆದು ವಿದ್ಯಾರ್ಥಿಗಳಿಗೆ ಬೋಧಿಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಬೇಕೆಂದು ಪಠ್ಯಕ್ರಮಗಳಲ್ಲಿ ಹೆಚ್ಚಿನ ಕಂಟೆಂಟ್ ಗಳನ್ನು ವಿಸ್ತೃತವಾಗಿ ಸೇರಿಸಿ ಕಲಿಕೆಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಲಾಗಿದೆ. ಪಠ್ಯಕ್ರಮಗಳು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಅಂತರ್ಜಾಲದಲ್ಲಿ ಮೊದಲೇ ಲಭ್ಯವಿದ್ದುದರಿಂದ ವಿದ್ಯಾರ್ಥಿಗಳಿಗೆ ಅಥವಾ ಬೋಧಕರಿಗೆ ಪಠ್ಯಕ್ರಮಗಳ ಬೋಧನೆಯಲ್ಲಿ ತೊಂದರೆಯಾಗಿರುವುದಿಲ್ಲ. |

| | | |
|---|---|---|
| | | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಜಾಲತಾಣದಲ್ಲಿ ಪ್ರಕಟಿತ 5ನೇ ಮತ್ತು 6ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ಆಧರಿಸಿಯೇ ವಿಶ್ವವಿದ್ಯಾಲಯದ ಅಧೀನದ ಕಾಲೇಜುಗಳು ಅಂತರ್ಜಾಲದಿಂದ ಅನುಸ್ಥಾಪಿಸಿಕೊಂಡು ಪಾಠ ಪ್ರವಚನ ನಡೆಸಲಾಗಿರುತ್ತದೆ. |
| **(ಇ)** | ಡಿಸೆಂಬರ್ ಅಂತ್ಯಕ್ಕೆ ಪಠ್ಯ ಬೋಧನೆ ಪೂರ್ಣಗೊಳಿಸಿ ಜನವರಿಯಲ್ಲಿ ಪರೀಕ್ಷೆಗಳು ನಡೆಯಬೇಕಾಗಿರುವುದರಿಂದ, ಪಠ್ಯವನ್ನು ಪೂರ್ಣಗೊಳಿಸಲು ತೊಂದರೆ ಉಂಟಾಗುವುದಿಲ್ಲವೇ; (ಸಂಪೂರ್ಣ ಮಾಹಿತಿ ನೀಡುವುದು) | 5 ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವ ಮೊದಲೇ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಪ್ರಕಟಿಸಲಾದ ಪಠ್ಯಕ್ರಮಗಳ ಬಗ್ಗೆ ಎಲ್ಲ ಕಾಲೇಜುಗಳಿಗೆ ಮಾಹಿತಿ ದೊರಕಿತ್ತು. ಸದರಿ ಪಠ್ಯಕ್ರಮಗಳನ್ನಾಧರಿಸಿ ಕಾಲೇಜುಗಳು ಪಾಠಪ್ರವಚನ ನಡೆಸಿರುತ್ತಾರೆ. |
| **(ಈ)** | ತರಗತಿ ಆರಂಭವಾಗಿ ಒಂದುವರೆ ತಿಂಗಳು ಕಳೆದರು ಪಠ್ಯಕ್ರಮಗಳನ್ನು ನೀಡದೇ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ತೊಂದರೆ ಆಗುವುದಿಲ್ಲವೇ? ಇದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು? | ವಿಶ್ವವಿದ್ಯಾಲಯದ 2023-24ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಂತೆ, 5ನೇ ಸೆಮಿಸ್ಟರ್ ಪರೀಕ್ಷೆಗಳು ದಿನಾಂಕ:23-01-2024 ರಿಂದ ಪ್ರಾರಂಭಗೊಳ್ಳಲಿದ್ದು, ಪಠ್ಯಕ್ರಮಗಳನ್ನು ಪೂರ್ಣಗೊಳಿಸಲು ಸಾಕಷ್ಟು ಕಾಲಾವಕಾಶವಿರುತ್ತದೆ. ಪಠ್ಯಕ್ರಮಗಳ ಬೋಧನೆಯಲ್ಲಿ ಏನಾದರೂ ಅಪೂರ್ಣತೆ ಇರುವ ಬಗ್ಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಪತ್ರ ಬಂದ್ದಲ್ಲಿ ನಿಗಧಿತ ಸಮಯದಲ್ಲಿ ಮುಗಿಸಲು ವಿಶೇಷ ತರಗತಿಗಳನ್ನು (Special Class) ನಡೆಸುವಂತೆ ಕಾಲೇಜುಗಳಿಗೆ ಸೂಕ್ತ ನಿರ್ದೇಶನ ನೀಡಿ 5ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು 15 ದಿನಗಳ ಕಾಲ ಮುಂದೂಡಿ ರಜಾ ಅವಧಿಯನ್ನು ಕಡಿತಗೊಳಿಸಿ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ 2023-24ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಪೂರ್ಣಗೊಳಿಸಲು ಯಾವುದೇ ವ್ಯತ್ಯಯವಾಗದಂತೆ ಕ್ರಮ ವಹಿಸಲಾಗುವುದು. |

**ಸಂಖ್ಯೆ: ಇಡಿ/483/ಯುಬಿವಿ/2023**

**(ಡಾ|| ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ